ಮುಂದಿನ ಎರಡು ತಿಂಗಳಲ್ಲಿ ನಾವು ಮನೆಗೆ ವಾಸಕ್ಕೂ ಬಂದಿದ್ದಾಯ್ತು. ಟ್ರಕ್‌ನಿಂದ ವಸ್ತುಗಳನ್ನು ಇಳಿಸುತ್ತಿದ್ದ ಹುಡುಗರಿಗೆ ಒಂದಿಷ್ಟು ಸೂಚನೆಗಳನ್ನು ಕೊಡುತ್ತಾ, 'ಹಾಲಿನವರಿಗೆ ಹೇಳಲಾ ದೀದಿ?', 'ಪೇಪರ್ ಹುಡುಗನಿಗೆ ಹೇಳಬೇಕಾ ಸಾಬ್?' ಎಂದೆಲ್ಲಾ ನಮ್ಮ ಸುತ್ತಲೇ ಓಡಾಡುತ್ತಾ ಸ್ನೇಹ ಗಳಿಸಿಕೊಂಡಿದ್ದ ಆತ. 'ಹೆಸರೇನು?' ಎಂದು ಕೇಳಿದಾಗ 'ಅಚ್ಚೆಕುಮಾರ್' ಎಂದ. ಸ್ವಲ್ಪವೂ ಕನ್ನಡ ಮಾತಾಡದ ಅವನನ್ನು 'ನಿಮ್ಮೂರು ಯಾವುದು ಅಚ್ಚೆ?' ಎಂದು ಕೇಳಿದಾಗ, 'ಹಮ್ ಬಿಹಾರ್ ಕೆ ಹೈ. ನಾಮ್ ಅಪ್ನಾ ಅಚ್ಚೆ ನಹಿ, ಅಚ್ಫೆ... ಅಚ್ಫೆ ಹೈ' ಎಂದಿದ್ದ. ಅವನ ಹಾವಭಾವಗಳನ್ನು ಕಂಡು ನಗು ತಡೆಯಲಾರದ ಸುಜಿ, 'ಎಲ್ಲಾ ಒಂದೇ ಅಲ್ಲವಾ' ಎಂದು ಕೇಳಿದಾಗ, ಬಳಿಯಲ್ಲೇ ಇದ್ದ ಅವನ ಹೆಂಡತಿ, 'ಅಚ್ಚೆಕುಮಾರ್ ನಹೀಂ, ಇನ್ಕಾ ನಾಮ್ ಅಕ್ಷಯ್ ಕುಮಾರ್ ಹೈ' ಎಂದು ನಾಚುತ್ತಾ ನುಡಿದಿದ್ದಳು!

ಅವನಪ್ಪ ಅಮ್ಮ ಇಟ್ಟ ಹೆಸರು ಏನೇ ಆಗಿದ್ದರೂ ಅವನು ಅಪಾರ್ಟ್‌ಮೆಂಟ್‌ನ ಎಲ್ಲರಿಗೂ ಅಚ್ಚೆ! ಮನೆಯ ನಲ್ಲಿಯಲ್ಲಿ ನೀರು ಬರುತ್ತಿಲ್ಲವೇ? 'ಅಚ್ಚೇ ಜರಾ ದೇಖೋ.' ಯಾವುದೋ ಸ್ವಿಚ್ಚು ಕೆಲಸ ಮಾಡುತ್ತಿಲ್ಲವೇ? 'ಅಚ್ಚೇ ಏಕ್ ಮಿನಿಟ್' ನಾಲ್ಕು ದಿನದಿಂದ ಗಾರ್ಡನ್ ಕೆಲಸದವ ಬಾರದೆ ಲಾನ್ ಒಣಗುತ್ತಿದೆಯೇ? 'ಅಚ್ಚೇ...' ಯಾವುದೋ ಲಿಫ್ಟ್ ಕೈಕೊಟ್ಟಿತೇ? 'ಅ...' ಜನರೇಟರ್ ಮುಷ್ಕರ ಹೂಡಿದೆಯೇ? ಬಾಲ್ಕನಿಯಲ್ಲಿ ಕಟ್ಟಿರುವ ಜೇನು ತೆಗೆಸಬೇಕೇ? ಕಾರಿನ ಡಿಕ್ಕಿ ತುಂಬಿರುವ ವಸ್ತುಗಳನ್ನು ಸಾಗಿಸಲು ನೆರವು ಬೇಕೇ? ಶಾಲೆಯ ಬಸ್ಸಿನಿಂದ ಇಳಿಯುವ ಕಂದಮ್ಮಗಳನ್ನು ರಸ್ತೆ ದಾಟಿಸಿ ಕರೆತರಬೇಕೇ? ಒಂದೇ ಮಾತಲ್ಲಿ ಹೇಳುವುದಾದರೆ, ನಮ್ಮ ಅಪಾರ್ಟ್‌ಮೆಂಟ್‌ನ ಸರ್ವ ರೋಗಕ್ಕೂ ಅಚ್ಚೆಯೇ ಮದ್ದು! ಅವನೂ ಹಾಗೆಯೇ ಯಾವ ಕಿಟಕಿಯಿಂದ ಸ್ವರ ಬಂದರೂ 'ಆಯಾ ದೀದಿ'. ಯಾವ ಬಾಲ್ಕನಿಯಿಂದ ಕರೆ ಬಂದರೂ 'ಆಯಾ ಮೇಮ್ ಸಾಬ್'. ಪಾರ್ಕಿಂಗ್‌ನಲ್ಲಿ ಯಾರು ಕಾರು ಶುಚಿ ಮಾಡುತ್ತಿದ್ದರೂ, 'ಛೋಡೊ ಸಾಬ್, ಹಮ್ ಕರ್ದೇಂಗೆ'. ಅವನೊಂದು ರೀತಿಯಲ್ಲಿ ನಮ್ಮ ಅಪಾರ್ಟ್‌ಮೆಂಟ್‌ನಲ್ಲಿ ಸರ್ವವ್ಯಾಪಿ.

ಹಾಗಂತ ತೀರಾ ಹದಿನೆಂಟಿಪ್ಪತ್ತರ ಹುಡುಗನೇನಲ್ಲ, ಮೂವತ್ತರ ಹಿಂದುಮುಂದಿರಬಹುದು ಆತನ ಪ್ರಾಯ. ಆರು ವರ್ಷದ್ದೊಂದು, ಮೂರು ವರ್ಷದ್ದೊಂದು ಕೂಸುಗಳಿವೆ ಆತನಿಗೆ. ಈಗ ಮೂರನೇದು ಇನ್‌ಮೇಕಿಂಗ್! ಹಾಗೆಂದೇ ಅಪಾರ್ಟ್‌ಮೆಂಟ್‌ನ ಕೆಲವರು ಕಾಲೆಳೆಯುತ್ತಾರೆ. 'ಅಚ್ಚೆಯ ಕೆಲಸಕ್ಕೆ ಫುಲ್ ಸ್ಟಾಪೇ ಇಲ್ಲ, ಬರೀ ಕಾಮ' ಎಂದೆಲ್ಲಾ ಚುಡಾಯಿಸಿದರೆ ಅವ ತಲೆ ಕೆಡಿಸಿಕೊಂಡವನೇ ಅಲ್ಲ. 'ಸರಿ, ಬಂದು ಇಷ್ಟು ವರ್ಷವಾಯ್ತಲ್ಲ, ಕನ್ನಡ ಕಲಿಯಬಾರದಾ?' ಎಂದು ಕೇಳಿದರೆ, 'ಕಲಿಯದೇ ಇಷ್ಟು ನಡೆಯುತ್ತದಲ್ಲ, ಸಾಲದಾ?' ಎಂಬ ಉದ್ಧಟತನದ ಉತ್ತರ ನೀಡುತ್ತಾನೆ. ಮಾತ್ರವಲ್ಲ, 'ಈಗ ಹಡೆಯುವುದಕ್ಕೆ ಊರಿಗೆ ಹೋಗುವ ಹೆಂಡತಿಯನ್ನು ಇಲ್ಲಿಗೆ ಮರಳಿ ಕರೆಸಿಕೊಳ್ಳುವುದಿಲ್ಲ. ಮಕ್ಕಳು ಅಲ್ಲಿಯೇ ಶಾಲೆಗೆ ಹೋಗಲಿ, ಇಲ್ಲಾದರೆ ಕನ್ನಡ ಕಲಿಯಬೇಕಲ್ಲ!' ಎಂದು ರಾಜಾರೋಷವಾಗಿ ಟಾಂಗ್ ಕೊಡುತ್ತಾನೆ. ಬಾಯಲ್ಲಿ ಏನೇ ಹೇಳಿದರೂ, ಅವನ ನಿಯತ್ತು ಮತ್ತು ಕೆಲಸದ ಬಗ್ಗೆ ಯಾರೂ ಕೆಮ್ಮಂಗಿಲ್ಲ. ಈ ಎಕ್ಸ್‌ಟ್ರಾ ಕೆಲಸಗಳಿಂದ ಅವನಿಗೊಂದಿಷ್ಟು ಪುಡಿಗಾಸೂ ಗಿಟ್ಟುತ್ತಿತ್ತು. ಹಾಗಾಗಿ ನಾವು ಅಪಾರ್ಟ್‌ಮೆಂಟಿಗರು ಸಿರಿಗನ್ನಡವನ್ನು ಗಲ್ಲಿಗೆ ಹಾಕಿ ಅವನೊಂದಿಗೆ ಅವನಿಗೆ ಬೇಕಾದ ಭಾಷೆಯಲ್ಲಿ ವ್ಯವಹರಿಸಿ, ನಮ್ಮ ಕೆಲಸ ಮಾಡಿಸಿಕೊಳ್ಳುತ್ತೇವೆ.

★★★

ಎಲ್ಲವೂ ಚೆನ್ನಾಗಿಯೇ ಇದ್ದರೆ ಕಥೆ ಮುಂದುವರಿಯಬೇಡವೇ? ಅಪಾರ್ಟ್‌ಮೆಂಟ್ ಸಮುಚ್ಚಯದ ಹಲವಾರು ಕೆಲಸಗಳು ಬಾಕಿ ಇರುವಂತೆಯೇ, ಇನ್ನು ತನ್ನಲ್ಲಿ ಹಣವಿಲ್ಲ ಎಂದು